ಬಡಪಾಯಿ ನೆಲ ಎಷ್ಟು ತಡೆದೀತು ಅವರು ಎಸೆಗಿದ ಪಾಪದ ಭಾರವನ್ನು? ಯುದ್ಧ ಮತ್ತು ಬರ ನಮ್ಮ ಆಹಾರ. ಅದೋ ನೋಡು ಬರದ ಉರಿಬೆಂಕಿಯಲ್ಲಿ ಬೇಯುತ್ತಿರುವ ನಿನ್ನ ನಗರವನ್ನು. ನಿನ್ನ ಪ್ರೀತಿ ಪಾತ್ರರೆಲ್ಲಾ ನಮ್ಮ ಆಹಾರ. ಮರೆತು ಬಿಡು ಸತ್ತವರನ್ನು; ಬದುಕಿಸಿಕೋ ಉಳಿದವರನ್ನು.

ಉದಾತ್ತ ಕಾಂಚೀನಗರವೇ ಕೇಳು, ಯಾವ ರಾಜನೂ ನಿಮ್ಮನ್ನು ರಕ್ಷಿಸಲಾರ. ಇನ್ನು ನಮ್ಮ ಪಾಲಿನದು ನಮಗೆ! ನಿಮ್ಮ ಪಾಲಿನದು ನಿಮಗೆ! ನಾವು ಇನ್ನೂ ಇರುತ್ತೇವೆ ಮಣ್ಣಿನ ಬಿರುಕಿನಲ್ಲಿ, ಬತ್ತಿದ ಜಲದ ಕಣ್ಣಿನಲ್ಲಿ, ಒಣಹುಲ್ಲಿನ ಬುಡದಲ್ಲಿ, ಮುಳ್ಳಿನ ಮೊನೆಯಲ್ಲಿ, ಒಣ ಮೋಡಗಳ ಗರ್ಭದಲ್ಲಿ!

ಕೊನೆಯದಾಗಿ ಕೇಳಿಸಿಕೋ: ಎಂದಿಗೆ ಯುದ್ಧ ಮತ್ತು ಬರ ಈ ಭೂಮಿಯಿಂದ ಹೇಳ ಹೆಸರಿಲ್ಲದಂತೆ ನಿರ್ಗಮಿಸುತ್ತದೋ ಅಂದಿಗೆ ನಾವು ಈ ಲೋಕವನ್ನು ಬಿಟ್ಟು ತೆರಳುತ್ತೇವೆ. ಅಲ್ಲಿನವರೆಗೂ ನಾವು ಈ ಭೂಮಿಯ ಮೇಲೆಯೇ ಬಿಡಾರ ಹೂಡಿರುತ್ತೇವೆ. ನೆಚ್ಚಿಕೊಳ್ಳಿ ನಿಮ್ಮ ನಿಮ್ಮ ಆತ್ಮಬಲವನ್ನು'

ಕಾಂಚೀಪುರ ತನ್ನ ನತದೃಷ್ಟ ಕಣ್ಣುಗಳಿಂದ ಇದನ್ನೆಲ್ಲಾ ನೋಡಲಾಗದೆ ಎರಡು ತೊಟ್ಟು ಕಣ್ಣೀರನ್ನು ನೆಲದ ಮೇಲೆ ಉದುರಿಸಿತು. ನೀರನ್ನು ಕಂಡು ಎಷ್ಟೋ ದಿನಗಳಾಗಿ ಹುಡಿ ಹುಡಿಯಾಗಿದ್ದ ಮಣ್ಣು, ಆ ಕಣ್ಣೀರ ಹನಿಗಳನ್ನು ಸರಕ್ಕನೆ ತನ್ನೊಳಗೆ ಬಾಚಿಕೊಂಡಿತು.

* * *

ಬಂದಿದ್ದ ಕಾಂಚೀಪುರದ ಅತಿಥಿಗಳನ್ನು ಬೀಳ್ಕೊಟ್ಟ ಶಾತ್ತನಾರ್ ಮರಳಿ ತಮ್ಮ ಕೊಠಡಿಗೆ ಬಂದು ಮಂಚದ ಮೇಲೆ ಮೈಚೆಲ್ಲಿದರು. ಹೊರಗೆ ನೆತ್ತಿಗೇರಿದ್ದ ಚಂದ್ರನ ಮೇಲೆ ಮೋಡಗಳು ಮುಸುಕಿದ್ದರಿಂದ ಭೂಮಿಯನ್ನು ಬೆಳಗುತ್ತಿದ್ದ ತಿಂಗಳ ಬೆಳಕು ಮಂಕಾಗಿತ್ತು. ಕಣ್ಣುಮುಚ್ಚಿದರೆ ಸಾಕು ಕೆಂಗೂದಲಿನ ಆ ಮಗು, ನೋವೇ ಮಡುಗಟ್ಟಿದ್ದ ಆ ನತದೃಷ್ಟ ಹೆಣ್ಣಿನ ಕಣ್ಣುಗಳು ಇವೇ ಮುಂದೆಬಂದು ನಿಲ್ಲುತ್ತಿದ್ದವು. ಸಂಕಟವನ್ನೆಲ್ಲಾ ಒಳಗಿಟ್ಟುಕೊಂಡೇ ಶಾತ್ತನಾರ್ ಕಿಟಕಿಯಾಚೆಗೆ ಕಣ್ಣು ಹಾಯಿಸಿದರು. ಕತ್ತಲಲ್ಲಿ ಏನೂ ಕಾಣುತ್ತಿರಲಿಲ್ಲ. ಆದರೆ ಆ ನೀರವತೆಯಲ್ಲಿಯೂ ವೈಗೈ ನದಿ ಹರಿಯುತ್ತಿರುವ ಶಬ್ದ ಮಾತ್ರ ಕೇಳಿಸುತ್ತಿತ್ತು. ಅವರ ಮನಸ್ಸು ಈಗಲೂ ಅದೇ ಮಾತನ್ನು ಹೇಳುತ್ತಿತ್ತು:

'ನನಗೆ ಸಾಧ್ಯವಿದ್ದರೆ, ಮಧುರೆಯ ವೈಗೈ ನದಿಯನ್ನೇ ಅವರಿಗೆ ಕೊಟ್ಟುಬಿಡುತ್ತಿದ್ದೆ!'

ಅವರ ದೇಹ ಮತ್ತು ಮನಸ್ಸು ಬಳಲಿದ್ದರಿಂದ ನಿಧಾನವಾಗಿ ಶಾತ್ತನಾರ್ ನಿದ್ರೆಗೆ ಜಾರಿದರು. ಎಲ್ಲವೂ ನೀರವತೆಯಲ್ಲಿ ಕರಗಿಹೋಯಿತು. ಆದರೆ ಸೋತ ಅವರ ಹೆಜ್ಜೆಗಳ ಶಬ್ದ ಮಾತ್ರ ಅವರ ಕಿವಿಯಲ್ಲಿ ಉಳಿದಿತ್ತು. ಅವರು ಮಲಗಿದ್ದ ಕೊಠಡಿಯ ತುಂಬೆಲ್ಲಾ ಹೆಜ್ಜೆಗಳ ಶಬ್ದ. ಆ ಶಬ್ದ ನಿಧಾನವಾಗಿ ಆ ಕೊಠಡಿಯನ್ನೇ ಆವರಿಸಿಕೊಂಡಿತು. ನೂರಾರು, ಸಾವಿರಾರು, ಲಕ್ಷ ಸಂಖ್ಯೆಯಲ್ಲಿ ತೆರೆದ ಕಿಟಕಿಯ ಮೂಲಕ ಬಂದಿಳಿದ ಹೆಜ್ಜೆಗಳ ಶಬ್ದದಿಂದ ಆ ಕೊಠಡಿ ತುಂಬಿಹೋಯಿತು. ಕೊಠಡಿಯ ತುಂಬಾ ಏದುಸಿರಿನ ಶಬ್ದ. ಬಿಸಿಯುಸಿರಿನಿಂದಾಗಿ ಶಾತ್ತನಾರ್ ಅವರಿಗೆ ಉಸಿರುಕಟ್ಟಿದಂತಾಯಿತು. ಉಸುರಿನ ಬಿಸಿಹಬೆಗೆ ಅವರ ಹಣೆಯಲ್ಲಿ ಬೆವರಹನಿಗಳು ಸಾಲಾಗಿ ಮೂಡಿದವು. ಎಷ್ಟೇ ಪ್ರಯತ್ನಪಟ್ಟರೂ ಕಣ್ಣುತೆರೆಯಲು ಆಗುತ್ತಿರಲಿಲ್ಲ! ಮನೆಯವರನ್ನು ಕರೆಯೋಣವೆಂದರೆ, ಧ್ವನಿಯೇ ಹೊರಡುತ್ತಿರಲಿಲ್ಲ! ನೂರಾರು ಜನ, ಸಾವಿರಾರು ಜನ ತನ್ನನ್ನು ಸುತ್ತುವರೆದಿರುವಂತೆ ಭಾಸವಾಯಿತು. ಹೇಗೋ ಏಕ್ಕಾಸದಿಂದ ಕಣ್ಣುತೆರೆದರು. ಕೊಠಡಿಯ ಬಾಗಿಲು ಭದ್ರವಾಗಿತ್ತು. ಸಾವಿರಾರು ಜನ ತನ್ನ ಮುಂದೆ ನಿಂತಿದ್ದರು. ಕಿಟಕಿಯ ಸರಳುಗಳ ಮೇಲೆ, ಮಂಚದ ಮೇಲೆ, ನೀರಿನ ಮಿಳ್ಳೆಯಮೇಲೆ, ಬೀಗದೆಸಳಿನ ಮೇಲೆ, ಕಳಚಿಟ್ಟ ಬಟ್ಟೆಯ ಮೇಲೆ ಸಾವಿರಾರು ಜನ ನಿಂತಿದ್ದರು. ಹೆಚ್ಚು ಕತ್ತಲು ಕವಿದಿದ್ದರಿಂದ ಬಂದವರ ಮುಖಗಳು ಕಾಣುತ್ತಿರಲಿಲ್ಲ! ಸರಿಯಾಗಿ ನೋಡಿದರೆ, ಅವರ ಕಟಬಾಯಲ್ಲಿ, ದೇಹದ ಮೇಲೆ ರಕ್ತದ ಕಲೆಗಳು ಕಂಡು ಬರುತ್ತಿದ್ದವು. ಮೈಗೆಲ್ಲಾ ರಕ್ತವರ್ಣದ ತೈಲವನ್ನು ಬಳಿದುಕೊಂಡಿದ್ದರು. ಎಲ್ಲರ ಮುಖವೂ ಕಿಚ್ಚಿನಂತೆ ಉರಿಯುತ್ತಿತ್ತು! ಬಂದವರೆಲ್ಲರೂ ತನ್ನನ್ನೇ ದುರಗುಟ್ಟಿಕೊಂಡು ನೋಡುತ್ತಿದ್ದರು. ಹೆಚ್ಚು ತಾಳ್ಮೆಗೆಟ್ಟವರಂತೆ ಕಾಣುತ್ತಿದ್ದ ಅವರು ತನ್ನೊಡನೆ ಮಾತನಾಡಲು ಕಾತರಿಸುತ್ತಿರುವಂತೆ ಕಾಣುತ್ತಿತ್ತು.

ಶಾತ್ತನಾರ್ ಎದೆಗುಂದದೆ 'ನೀವೆಲ್ಲಾ ಯಾರು? ನಿಮ್ಮನ್ನು ಇದುವರೆಗೂ ಎಲ್ಲಿಯೂ ನೋಡಿದ ನೆನಪಿಲ್ಲ! ಹೀಗೆ ಹೇಳದೆ, ಕೇಳದೆ ಇಷ್ಟೊಂದು ಸಂಖ್ಯೆಯಲ್ಲಿ ನನ್ನ ಮನೆಗೆ ಬಂದಿದ್ದೀರಲ್ಲ! ನನ್ನಿಂದ